ದಿನಾಂಕಃ **04-04-2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಸ್ ವಕೀಲರಿಂದ ಃ

ಆರೋಪಿಯು ನನ್ನ ಸ್ನೇಹಿತರ ಮುಖಾಂತರ ಪರಿಚಯವಾಗಿರುತ್ತಾರೆ. ಆರೋಪಿಯ ಸ್ವಂತ ಊರು ಹಾಸನ ಆಗಿರುತ್ತದೆ. ಆರೋಪಿಯು ಲಕ್ಷ್ಮೀಶ ಪಿ ಯು ಕಾಲೇಜ್ ನಲ್ಲಿ ಕ್ಲರ್ಕ ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಆರೋಪಿಯು ಹೌಸಿಂಗ್ ಬೋರ್ಡ ಚಿಕ್ಕಮಗಳೂರಿನಲ್ಲಿ ವಾಸವಾಗಿರುತ್ತಾರೆ ಆದರೆ ನಾನು ಅವರ ಮನೆಯನ್ನು ನೋಡಿರುವುದಿಲ್ಲ. ಆರೋಪಿಯ ಹೌಸಿಂಗ್ ಬೋರ್ಡ ಚಿಕ್ಕಮಗಳೂರಿನ ವಿಳಾಸಕ್ಕೆ ನೋಟೀಸನ್ನು ಯಾವುದೇ ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಾನು ಅವರ ಮನೆಯನ್ನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಸ್ವಂತ ಊರು ಕಡೂರು ತಾಲ್ಲೂಕು, ಪಂಚೆ ಹೊಸಹಳ್ಳಿ ಆಗಿರುತ್ತದೆ. ನಾನು ಆರೋಪಿಗೆ ನೋಟೀಸನ್ನು ನೀಡುವ ಸಮಯದಲ್ಲಿ ಪೋಲೀಸ ಇಲಾಖೆಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದೆ. ನಾನು ಯಾವ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂಬುದರ ಬಗ್ಗೆ ದೂರಿನ ಶೀರ್ಷಿಕೆಯಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿ. ಆರೋಪಿ ಮತ್ತು ನನ್ನ ನಡುವೆ ಜಮೀನ ಅಥವಾ ಸೈಟಿನ ವಿಚಾರವಾಗಿ ಮಾತುಕತೆಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸೈಟಿನ ವಿಚಾರದ ಬಾಬ್ತು ಆರೋಪಿಯು ಬೇರೆಯವರಿಂದ ಮುಂಗಡವಾಗಿ ನನಗೆ ಹಣವನ್ನು ಕೊಡಿಸಿದ್ದರು ಎಂದರೆ ಸರಿಯಲ್ಲ. ನಾನು ಸದರಿ ಸೈಟಿನ ವಿಚಾರವಾಗಿ ಆರೋಪಿಯಿಂದ ಚೆಕ್ ನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ದೂರನ್ನು ಸಲ್ಲಿಸಲು ನನ್ನ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು ಸಲ್ಲಿಸಿರುವ ದೂರಿನ 2 ನೇ ಪ್ಯಾರಾದಲ್ಲಿ ದಿಃ 28-01-2023 ರಂದು ಸೈಟ್ ನ್ನು ಖರೀದಿ ಮಾಡುವ ಸಲುವಾಗಿ ಹಣವನ್ನು ಪಡೆದು ಕೊಂಡಿರುತ್ತಾರೆ ಎಂದು ನಮೂದಿರುತ್ತದೆ ಎಂದರೆ ಸರಿ. ಆರೋಪಿಯು ನನ್ನಿಂದ ನಾನು ಸೈಟ್ ನ್ನು ಖರೀದಿ ಮಾಡುತ್ತಿದ್ದೇನೆ ಹಾಗಾಗಿ ಹಣವನ್ನು ನೀಡುವಂತೆ ನನ್ನ ಬಳಿ ಹಣವನ್ನು ಕೇಳಿರುತ್ತಾರೆ. ನಾನು ಆರೋಪಿಗೆ ಹಣವನ್ನು ನೀಡುವ 4 ದಿನಗಳ ಮುಂಚೆ ಆರೋಪಿ ನನ್ನ ಬಳಿ ಬಂದು ಹಣವನ್ನು ಕೇಳಿರುತ್ತಾರೆ. ನಾನು ಆರೋಪಿಗೆ ಹಣವನ್ನು ದಿಃ 28-01-2023 ರಂದು ಸಂಜೆ ನೀಡಿರುತ್ತೇನೆ. ನಾನು ಆರೋಪಿಗೆ ಹಣವನ್ನು ನೀಡುವ ಸಮಯದಲ್ಲಿ ಹನುಮಂತಪ್ಪ ಸರ್ಕಲ್ ನ ಬಳಿ ನಾನು ಹಾಗೂ ಆರೋಪಿ ಇದ್ದೆವು. ನಾನು ಆರೋಪಿಗೆ ಹಣವನ್ನು ಹನುಮಂತಪ್ಪ ಸರ್ಕಲ್ ನ ಬೇಕರಿಯ ಮುಂಭಾಗದಲ್ಲಿ ನೀಡಿರುತ್ತೇನೆ. ನಾನು ಆರೋಪಿಗೆ 1,45,000/- ರೂ ಹಣವನ್ನು ನೀಡಿರುತ್ತೇನೆ. ನನ್ನ ಮಗನ ಶಾಲಾ ಫೀಜ್ ಕಟ್ಟಲು ಇಟ್ಟು ಕೊಂಡಂತಹ ಹಣವನ್ನು ಆರೋಪಿಗೆ

This is a True Copy of the Court Records Online. Authenticated @ districts.ecourtsindia.com/cnr/KACM030025522023/truecopy/order-1.pdf

ನೀಡಿರುತ್ತೇನೆ. ನಾನು ಆರೋಪಿಗೆ 500/- ರೂ ಮುಖಬೆಲೆಯ ನೋಟುಗಳನ್ನು ನೀಡಿರುತ್ತೇನೆ. ನಾನು ಆರೋಪಿಗೆ 500 ರೂ ಮುಖಬೆಲೆಯ 290 ನೋಟುಗಳನ್ನು ನೀಡಿರುತ್ತೇನೆ. ನಾನು ಆರೋಪಿಗೆ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-1 ಚೆಕ್ ನ್ನು ಬ್ಯಾಂಕಿಗೆ 02 ಬಾರಿ ಹಾಜರುಪಡಿಸಿರುತ್ತೇನೆ. ಬ್ಯಾಂಕಿನವರು ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ಹಿಂಬರಹವನ್ನು ನೀಡಿರುತ್ತಾರೆ. ನಾನು ಎರಡನೇ ಬಾರಿ ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸಿದಾಗ ಏನೆಂದು ಹಿಂಬರಹ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಬ್ಯಾಂಕಿನವರು required information not legible correct ಎಂಬುದಾಗಿ ಹಿಂಬರಹ ನೀಡಿರುತ್ತಾರೆ ಎಂದರೆ ಸರಿ. ನಾನು ಮೊದಲನೆ ಬಾರಿ ಬ್ಯಾಂಕಿಗೆ ಚೆಕ್ ನ್ನು ಹಾಜರುಪಡಿಸಿದಾಗ ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇತ್ತು ಎಂದು ಸೂಚಿಸುವುದು ಸರಿಯಲ್ಲ. ದಿಃ 01-05-2023 ರಂದು ಬ್ಯಾಂಕಿನವರು ಸರಿಯಾಗಿ ಮಾಹಿತಿಯನ್ನು ನೀಡುವಂತೆ ಹಿಂಬಹರವನ್ನು ನೀಡಿರುತ್ತಾರೆ ಎಂದರೆ ಸರಿ. ನಾನು ಬ್ಯಾಂಕಿಗೆ ಸರಿಯಾದ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ,

3 ನೇ ಹೆಚ್ಚು ವರಿ ಸಿವಿಲ್ ನ್ಯಾಯಾಧೀಶರು,
ಪ್ರ ದ ನ್ಯಾದಂ ., ಚಿಕ್ಕಮಗಳೂರು

This is a True Copy of the Court Records Online. Authenticated @ districts.ecourtsindia.com/cnr/KACM030025522023/truecopy/order-1.pdf